

ಗಜಾನನ ಬಾಲೆ, ಶಿರಸಿಯ ಮನೋಜ್ ಹೆಗಡೆ, ದಾವಣಗೆರೆಯ ಅವಿನಾಶ್ ಚಿತ್ರದುರ್ಗದ ಬೆನಕಪ್ರಸಾದ್, ಡಿ.ಎಚ್. ವಿನಯಕುಮಾರ್, ಹಾಸನದ ರವಿನಂದನ್ ಬಿ.ಎಂ., ಕೊಡಗಿನ ಎಂ.ಪಿ. ರಾಜೇಶ್ ಪೊನ್ನಪ್ಪ, ಮೈಸೂರಿನ ಮೇಘನಾ ಕೆ.ಟಿ. ಅವರೆಲ್ಲ ಸಾಧನೆಗೆ ಪ್ರಾದೇಶಿಕ ಮಿತಿಗಳು ಯಾವುವೂ ಅಡ್ಡಿಯಾಗವು ಎಂಬುದನ್ನು ಸಾಬೀತು ಮಾಡಿದ್ದಾರೆ. ಗ್ರಾಮಾಂತರ ಭಾಗದವರು, ಅದರಲ್ಲೂ ಉತ್ತರ ಕರ್ನಾಟಕದವರು, ಈ ಸಲದ ಪರೀಕ್ಷೆಯಲ್ಲಿ ಯಶಸ್ಸಿನ ಸವಿ ಉಂಡಿರುವುದು ವಿಶೇಷವಾಗಿದೆ ಮತ್ತು ಭರವಸೆದಾಯಕ ಭವಿಷ್ಯದತ್ತ ಬೆಳಕು ಹರಿಸಿದೆ.

ಕಳೆದ ವರ್ಷ ನಾಗರಿಕ ಸೇವಾ ಪರೀಕ್ಷೆಯನ್ನು ಪಾಸು ಮಾಡಿದ್ದ ಕೇರಳದ ವಿವೇಕ್ ಕೆ.ವಿ. ಅವರದಂತೂ ಅಸಾಧಾರಣ ಯಶೋಗಾಥೆ. ಕಾಸರಗೋಡು ಜಿಲ್ಲೆಯ ಕುಟ್ಟಿಕೋಳ್ ಎಂಬ ಪುಟ್ಟ ಗ್ರಾಮದ ವಿವೇಕ್, ಸಗಣಿಯ ನೆಲಹಾಸು ಹೊಂದಿದ್ದ ಮಣ್ಣಿನ ಮನೆಯಲ್ಲಿ ವಾಸವಾಗಿದ್ದವರು. ತಂದೆ ಮದ್ಯವ್ಯಸನಿ. ತಾಯಿ ಅಂಚೆ ಇಲಾಖೆಯಲ್ಲಿ ಸಣ್ಣ ಉದ್ಯೋಗದಲ್ಲಿದ್ದರು. ಮನೆಯ ನಿರ್ವಹಣೆಯೇ ಕಡುಕಷ್ಟವಾಗಿದ್ದ ದಿನಗಳವು. ವಿವೇಕ್, ತಮ್ಮ ಹಳ್ಳಿಯಿಂದ ಪಟ್ಟಣದ ಶಾಲಾ–ಕಾಲೇಜಿಗೆ ಹೋಗಲು ಬಸ್‌ನಲ್ಲಿ ಪಕ್ಕದ ಊರಿಗೆ ತೆರಳಿ ಅಲ್ಲಿಂದ ರೈಲಿನಲ್ಲಿ ಪ್ರಯಾಣ ಮಾಡಬೇಕಿತ್ತು. ಶಾಲಾ–ಕಾಲೇಜಿಗೆ ಹೋಗಿ, ಬರಲು ಪ್ರತಿದಿನ ಬಸ್–ರೈಲಿನಲ್ಲೇ ಆರು ಗಂಟೆಗಳನ್ನು ಕಳೆಯಬೇಕಿತ್ತು. ಆ ಅವಧಿಯನ್ನೇ ಅಧ್ಯಯನಕ್ಕೆ ಸದ್ಬಳಕೆ ಮಾಡಿಕೊಂಡ ಈ ಸಾಧಕ, ಇಂಗ್ಲಿಷ್ ಜ್ಞಾನದ ಕೊರತೆಯನ್ನೂ ಮೆಟ್ಟಿನಿಂತರು. ಪದವಿ ಮುಗಿಸಿದ ಮೇಲೆ ಕೆಲಸ ಹುಡುಕಿಕೊಂಡು ಬಿಡುವಿನ ಅವಧಿಯಲ್ಲಿ ಯುಪಿಎಸ್‌ಸಿಗೆ ತಯಾರಿ ನಡೆಸಿದರು. ಅದರಲ್ಲಿ ಯಶಸ್ವಿಯೂ ಆದ ಈ ಹುಡುಗ ಈಗ ಸಾವಿರಾರು ಬಡಮಕ್ಕಳ ಪಾಲಿಗೆ ಸ್ಫೂರ್ತಿಯ ಚಿಲುಮೆ.

## ಸುರಭಿ ಯಶಸ್ಸಿನ ಪಾಠ

ಮಧ್ಯಪ್ರದೇಶದ ಸುರಭಿ ಗೌತಮ್ ಸಂಪ್ರದಾಯಸ್ಥ ಕುಟುಂಬದಿಂದ ಬಂದವರು. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿ, ಲಕ್ಷಾಂತರ ಯುವಕರಿಗೆ ಪ್ರೇರಣೆಯಾದವರು. ಅವರು ನೀಡಿದ ‘ಟೆಡ್ ಟಾಕ್’ ಅನ್ನು ಒಂದೂವರೆ ಕೋಟಿ ಜನ ವೀಕ್ಷಿಸಿರುವುದು ದಾಖಲೆಯೇ. ಹೆಣ್ಣು ಮಕ್ಕಳನ್ನು ಹೆಚ್ಚು ಓದಿಸುವುದೇಕೆ? ಅವರನ್ನು ಬೇಗ ಮದುವೆ ಮಾಡಿಕೊಟ್ಟರೆ ಮುಗಿಯಿತು ಎನ್ನುವ ಮನಃಸ್ಥಿತಿ ಹೆಚ್ಚಾಗಿದ್ದ ಪ್ರದೇಶ ಅವರದಾಗಿತ್ತು. ಅವರ ಪುಟ್ಟ ಗ್ರಾಮದಲ್ಲಿ ಜನಸಂಖ್ಯೆ ಹೆಚ್ಚೆಂದರೆ ಸಾವಿರ ಇದ್ದೀತು. ಈ ಊರಿನಲ್ಲಿ ಸುರಭಿ ಅವರದೂ ಒಂದು ಕೂಡು ಕುಟುಂಬ. ಐದನೇ ಕ್ಲಾಸ್‌ನಲ್ಲಿ ಓದುತ್ತಿದ್ದಾಗ ಅವರಿಗೆ ಗಣಿತದಲ್ಲಿ ನೂರಕ್ಕೆ ನೂರು ಅಂಕ ಬಂದಿತ್ತಂತೆ. ಹತ್ತನೇ ತರಗತಿ ಪರೀಕ್ಷೆಯಲ್ಲಿ ಗಣಿತ ಮಾತ್ರವಲ್ಲದೆ ವಿಜ್ಞಾನದಲ್ಲೂ ನೂರಕ್ಕೆ ನೂರು ಅಂಕ ಬಂದಿತ್ತಂತೆ. ಆ ಸಂದರ್ಭದಲ್ಲಿ ಕ್ಲಾಸ್ ಟೀಚರ್ ಆಡಿದ ಸ್ಫೂರ್ತಿಯ ಮಾತುಗಳು ಮತ್ತು ಪತ್ರಿಕೆಯಲ್ಲಿ ಬಂದ ತಮ್ಮ ಸಂದರ್ಶನ ತಮ್ಮ ಯೋಚನೆಯ ದಿಕ್ಕನ್ನೇ ಬದಲಿಸಿದವು. ಇಲ್ಲದಿದ್ದರೆ ಊರಿನ ಹತ್ತು ಹುಡುಗಿಯರಲ್ಲಿ ತಾವೂ ಹನ್ನೊಂದನೆಯವಳಾಗಿ ಕಳೆದುಹೋಗುತ್ತಿದ್ದುದಾಗಿ ಆಕೆ ಹೇಳುತ್ತಾರೆ.

ಬಾಲ್ಯದಲ್ಲಿ ಸಂಧಿವಾತ ಜ್ವರದಿಂದ ಬಳಲುತ್ತಿದ್ದ ಸುರಭಿ, ಪ್ರತೀ ಹದಿನೈದು ದಿನಕ್ಕೊಮ್ಮೆ ಪೆನ್ಸಿಲಿನ್ ಇಂಜೆಕ್ಷನ್ ಪಡೆಯಬೇಕಿತ್ತು. ಆರೋಗ್ಯದ ಸಮಸ್ಯೆಯ ನಡುವೆ ಸರಿಯಾಗಿ ವಿದ್ಯುತ್ ಪೂರೈಕೆಯಾಗದ ತಮ್ಮ ಗ್ರಾಮದಲ್ಲಿ ಸೀಮೆ ಎಣ್ಣೆಯ ದೀಪದಲ್ಲೇ ಓದಬೇಕಿತ್ತು. ‘ಕಲೆಕ್ಟರ್ ಆಗುವ ಆಸೆಯಿಂದ ಎಲ್ಲ ಅಡೆತಡೆಗಳನ್ನೂ ನಾನು ಮೆಟ್ಟಿನಿಂತೆ’ ಎಂದು 50ನೇ ರ್‍ಯಾಂಕ್ ಪಡೆದ ಸುರಭಿ ವಿವರಿಸುತ್ತಾರೆ.

ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ ಬಹುತೇಕರ ತಯಾರಿಯ ಮೇಲೆ ಕಣ್ಣು ಹಾಯಿಸಿದಾಗ ಎದ್ದು ಕಾಣುವುದು ಅವರು ಪತ್ರಿಕೆಗಳನ್ನು ತುಂಬಾ ಗಂಭೀರವಾಗಿ ಓದುತ್ತಿದ್ದರು ಎನ್ನುವುದು. ವಿಷಯಗಳ ವಿಶ್ಲೇಷಣೆಗೆ, ಸಮಕಾಲೀನ ವಿಷಯಗಳ ತಿಳಿವಿಗೆ ಪತ್ರಿಕೆಗಳ ಓದು ತುಂಬಾ ಮುಖ್ಯ ಎನ್ನುವುದು ಬಹುತೇಕರು ಹೇಳುವ ಮಾತು.

## ಮಾದರಿಗಳು ಸ್ಫೂರ್ತಿಯಾಗಲಿ

ಯಶಸ್ಸು ಗಳಿಸಿದವರ ಸ್ಫೂರ್ತಿಯ ಕಥೆಗಳಿಂದ ನಾವೂ ಈ ಪರೀಕ್ಷೆಗೆ ಉತ್ಸಾಹದಿಂದ ಸನ್ನದ್ಧರಾಗುವ ಮುನ್ನ ದೇಶದಲ್ಲಿ ನಾಗರಿಕ ಸೇವೆಗೆ ಎಂತಹ ಮಹತ್ವವಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಸರ್ದಾರ್ ವಲ್ಲಭಬಾಯಿ ಪಟೇಲ್ ಅವರಂತೂ, ‘ದೇಶಭಕ್ತಿ, ನಿಷ್ಠೆ, ಪ್ರಾಮಾಣಿಕತೆ ಹಾಗೂ ಸಾಮರ್ಥ್ಯದ ವಿಚಾರದಲ್ಲಿ ನಾಗರಿಕ ಸೇವಾ ಅಧಿಕಾರಿಗಳನ್ನು ಬಿಟ್ಟು ನಮಗೆ ಬೇರೆ ಪರ್ಯಾಯಗಳೇ ಇಲ್ಲ. ಈ ವಿಚಾರಗಳಲ್ಲಿ ಅವರು ನಮ್ಮಷ್ಟೇ ಶ್ರೇಷ್ಠರು’ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಅಸಮಾನತೆಗಳಿಂದ ಕೂಡಿರುವ ದೇಶದಲ್ಲಿ ರಾಷ್ಟ್ರೀಯ ಸಮಗ್ರತೆ ಮತ್ತು ಐಕ್ಯತೆಯ ರಕ್ಷಣೆಗಾಗಿ ಅಖಿಲ ಭಾರತ ಸೇವೆ ಬೇಕು ಎಂಬ ಕಾರಣದಿಂದ ಸಂವಿಧಾನಕ್ಕೆ 312ನೇ ವಿಧಿ ಸೇರ್ಪಡೆ ಮಾಡಲಾಗಿದೆ. 1951ರ ಅಖಿಲ ಭಾರತ ಸೇವೆಗಳ ಕಾಯ್ದೆ ಜಾರಿಗೊಳಿಸಿ ಈ ಅಧಿಕಾರಿಗಳಿಗೆ ರಕ್ಷಣೆಯನ್ನೂ ಒದಗಿಸಲಾಗಿದೆ. ರಾಜ್ಯಗಳ ಭಿನ್ನತೆ ಏನೇ ಇದ್ದರೂ ಸಮಾನ ಆಡಳಿತಕ್ಕಾಗಿ ಈ ವ್ಯವಸ್ಥೆ ಅತ್ಯಗತ್ಯ ಎನ್ನುವ ದೇಶ ನಿರ್ಮಾತೃಗಳ ಅನಿಸಿಕೆಯನ್ನೂ ಮರೆಯುವಂತಿಲ್ಲ.

ಪ್ರತಿಕ್ರಿಯಿಸಿ: feedback@sudha.co.in